ದೀವಟಿಗೆ

ವಾರಪತ್ರಿಕೆ, ಸಂಪಾದಕ: ಸಿರಿಮನೆ ನಾಗರಾಜ್.

ಖಾಸಗಿ ಪ್ರಸಾರಕ್ಕೆ | ಕೊಪ್ಪ, ೨೫-೪-೮೨ ಭಾನುವಾರ | ೧೪

ಎ. ಕೆ. ಸುಬ್ಬಯ್ಯನಿಂದ ಗಂಭೀರ ಆರೋಪ:

ಅಮ್ಮಡಿ ಎಸ್ಟೇಟ್‌ನಲ್ಲಿ ವ್ಯಾಪಕ ಒತ್ತುವರಿ, ಕಾಡು ನಾಶ; ಮಂತ್ರಿ ಶಾಮೀಲು

ಕೊಪ್ಪ: "ಇಲ್ಲಿನ ಅಮ್ಮಡಿ ಎಸ್ಟೇಟ್‌ನಲ್ಲಿ ನೂರಾರು ಎಕರೆಗೂ ಮಿಕ್ಕ ಕಾಡಿನ ಜಮೀನನ್ನು ಒತ್ತುವರಿ ಮಾಡಲಾಗಿದೆ. ಎಲ್ಲ ಕಾನೂನು ಕಟ್ಟಳೆಗಳನ್ನು ಉಲ್ಲಂಘಿಸಿ ವ್ಯಾಪಕವಾಗಿ ಕಾಡು ನಾಶ ಮಾಡಲಾಗಿದೆ. ಈ ಎಲ್ಲ ಅವ್ಯವಹಾರದಲ್ಲಿ ಮಂತ್ರಿಗಳೂ ಶಾಮೀಲಾಗಿದ್ದಾರೆ." ಎಂಬುದಾಗಿ ಭಾರತೀಯ ಜನತಾ ಪಕ್ಷದ ರಾಜ್ಯ ಅಧ್ಯಕ್ಷ ಎ. ಕೆ. ಸುಬ್ಬಯ್ಯ ಗಂಭೀರವಾದ ಆರೋಪ ಮಾಡಿದ್ದಾರೆ.

ಏ. ೧೭ ರಂದು ಕೊಪ್ಪ ಮತ್ತು ನ. ರಾ. ಪುರಗಳಲ್ಲಿ, ಭಾಜಪ ಆಶ್ರಯದಲ್ಲಿ ನಡೆದ ಬಹಿರಂಗ ಸಭೆಗಳಲ್ಲಿ ಮಾತನಾಡುತ್ತಿದ್ದ ಅವರು, "ಹೀಗೆ ಒತ್ತುವರಿ ಮಾಡಿ ಬಡಬಗ್ಗರಿಗೆ ದೊರೆಯಬೇಕಾಗಿದ್ದ ಜಮೀನನ್ನು ಲಪಟಾಯಿಸಿದ್ದಾರೆ; ಅರಣ್ಯ ಸಂಪತ್ತನ್ನು ಕೊಳ್ಳೆ ಹೊಡೆಯುತ್ತಿದ್ದಾರೆ; ಸರ್ಕಾರಕ್ಕೆ ವಂಚನೆ ಮಾಡಿದ್ದಾರೆ. ಅವರೂ ಮಂತ್ರಿಗಳೇ ಈ ವ್ಯವಹಾರಗಳಲ್ಲಿ ಶಾಮೀಲಾಗಿರುವುದರಿಂದ ಇದು ತಡೆಯಿಲ್ಲದೆ ನಡೆಯುತ್ತಿದೆ" ಎಂದು ತೀವ್ರವಾಗಿ ಆಪಾದಿಸಿದರು.

ಮೌಲ್ಯಗಳ ಪಕ್ಷ- ಹೊಸ ಸಮಾಜ ನಿರ್ಮಾಣ ಗುರಿ

ನಾನಾ ರೂಪದಲ್ಲಿ ಅನ್ಯಾಯ ಹೆಚ್ಚುತ್ತಿದೆ. ಬಡತನ, ನಿರುದ್ಯೋಗಗಳಿಂದ ಜನ ಕಂಗಾಲಾಗಿದ್ದಾರೆ "೨೦೦೦ ನೇ ಇಸವಿ ಹೊತ್ತಿಗೆ ಅದು ಕೊಡ್ತೀವಿ, ಇದು ಕೊಡ್ತೀವಿ" ಅಂತ ಲಕ್ಷಾಂತರ ರೂ. ಖರ್ಚು ಮಾಡಿ ಜಾಹಿರಾತು ಮಾಡುತ್ತ ಸರ್ಕಾರ ಬೂಟಾಟಿಕೆ ಮಾಡುತ್ತಿದೆ.

ಇಂಥ ಸಂದರ್ಭದಲ್ಲಿ ದೇಶದಲ್ಲಿ ಮೌಲ್ಯಗಳ ಆಧಾರದ ಶ್ರೇಷ್ಠ ಪರ್ಯಾಯವಾಗಿ ಬೆಳೆಯಬಲ್ಲ ಪಕ್ಷ ಭಾಜಪ ಒಂದೇ. ಬಡತನ ದುಃಖ, ನಿರುದ್ಯೋಗ ಇಲ್ಲದ, ಎಲ್ಲರಿಗೂ ಅನ್ನ, ಬಟ್ಟೆ, ವಸತಿ, ಉದ್ಯೋಗ, ವ[illegible], ಸುಖ- ಸಮೃದ್ಧಿ ಇರುವ ಹೊಸ ಸಮಾಜ ನಿರ್ಮಾಣ ಭಾಜಪ ಗುರಿ. ಎಂದ ಅವರು ಪಕ್ಷಕ್ಕೆ ಬೆಂಬಲ ಕೋರಿದರು.

ಚಿತ್ರದುರ್ಗ ಗೋಲೀಬಾರ್: ನ್ಯಾಯಾಂಗ ತನಿಖೆಗೆ ಒತ್ತಾಯ

ಗೋಕಾಕ ವರದಿಯ ಪೂರ್ಣ ಜಾರಿಗೆ ತಮ್ಮ ಪಕ್ಷದ ಬೆಂಬಲ ವ್ಯಕ್ತಪಡಿಸಿದ ಸುಬ್ಬಯ್ಯ, ಚಿತ್ರದುರ್ಗದ ಗೋಲಿಬಾರ್ ಬಗ್ಗೆ ನ್ಯಾಯಾಂಗ ತನಿಖೆಗೆ ಒತ್ತಾಯಿಸಿದರು.

ಶೃಂಗೇರಿಯಲ್ಲಿ

ಜಿಲ್ಲಾ ಪೊಲೀಸ್ ಮುಖ್ಯಾಧಿಕಾರಿಗಳೇ ಅನುಮತಿ ಕೊಟ್ಟಿದ್ದರೂ ಶೃಂಗೇರಿಯ ಪೋಲೀಸರು ಧ್ವನಿವರ್ಧಕ ಬಳಸಲು ಅನುಮತಿ ನಿರಾಕರಿಸಿರುವುದನ್ನು ಪ್ರತಿಭಟಿಸದ ಪಕ್ಷದ ಕಾರ್ಯಕರ್ತರ ಬಗ್ಗೆ ಸುಬ್ಬಯ್ಯ ತೀವ್ರವಾಗಿ ಆಕ್ಷೇಪಿಸಿದರು.

ಸುದ್ದಿ ಸುಬ್ಬಯ್ಯ...

ಬೆಂಗಳೂರಿನ ಬಸವನಗುಡಿಯಲ್ಲಿ ಈಜುಕೊಳದ ಉದ್ಘಾಟನೆಯನ್ನು ಕೊಳದಲ್ಲಿ ಸ್ವತಃ ಈಜಿ ನೆರವೇರಿಸಿದ ಮುಖ್ಯ ಮಂತ್ರಿ ಗುಂಡೂರಾಯರು, ಹೆರಿಗೆ ಆಸ್ಪತ್ರೆ ಉದ್ಘಾಟನೆಯನ್ನು ಯಾವ ರೀತಿ ನೆರವೇರಿಸಿಯಾರೋ!—ಸುಬ್ಬಯ್ಯನವರ ಗೇಲಿಯ ರೊಬ್ಬರ ಕುತೂಹಲವಂತೆ.

ಆಲೂರಿನ ಬಳಿ ಹರಿಜನರಿಗೆ ಮೀಸಲಾಗಿಟ್ಟಿದ್ದ ಜಮೀನನ್ನು ಶಾಸಕರೊಬ್ಬರು ಅತಿಕ್ರಮಿಸಿದ್ದು, ಅದೇ ಹರಿಜನರು ಅಲ್ಲೇ ಕೂಲಿಗೆ ಹೋಗುತ್ತಿದ್ದಾರಂತೆ.

[illegible] ಸಾವಿರ ಸ್ಟೈಪೆಂಡುಗಳು ತಮ್ಮನ್ನು ಮುಖ್ಯಮಂತ್ರಿಗಳು ಖಾಯಂ ಮಾಡುವರೆಂಬ ಆಸೆಯಿಂದ ಅವರ ತುಲಾಭಾರ ಮಾಡಿಸಿದರು. ಇದರಿಂದ ಆದ ಉಪಯೋಗವೇನೆಂದರೆ—ಮುಖ್ಯಮಂತ್ರಿಗಳ ತೂಕ ೯೨ ಕಿಲೋ ಅಂತ ಇವರಿಗೆ ಸರಿಯಾಗಿ ತಿಳಿದದ್ದು ಮಾತ್ರ.

ಯಶಸ್ವಿ ಉದರದರ್ಶಕ ಶಸ್ತ್ರ ಚಿಕಿತ್ಸಾ ಶಿಬಿರಗಳು

ಕೊಪ್ಪ: [illegible] ಮೆಡಿಕಲ್ ಕಾಲೇಜಿನ [illegible] ಡಾ|| [illegible] ಮತ್ತು ತಂಡದವರಿಂದ [illegible], ಕೊಪ್ಪ, ನ. ರಾ. ಪುರಗಳಲ್ಲಿ [illegible] ಉದರದರ್ಶಕ (ಲ್ಯಾಪ್ರೋಸ್ಕೋಪಿ) ಸಂತಾನಹರಣ ಶಸ್ತ್ರ ಚಿಕಿತ್ಸಾ ಶಿಬಿರಗಳು ನಡೆದವು.

ಕೊಪ್ಪದಲ್ಲಿ [illegible], ಶೃಂಗೇರಿಯಲ್ಲಿ [illegible] ಮತ್ತು ನ. ರಾ. ಪುರದಲ್ಲಿ [illegible] ಜನರು ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡರು.

ಉದರದರ್ಶಕ ಶಸ್ತ್ರ ಚಿಕಿತ್ಸಾ ಕ್ರಮ ಸಂತಾನಹರಣ [illegible] ಅತ್ಯಂತ ಸುಲಭವಾದ ವಿಧಾನವಾಗಿದೆ.

ಬೈದು ಕ್ಷಮಾಪಣೆ ಕೇಳಿದರು

ನ. ರಾ. ಪುರ: ಕಾಲೇಜಿನ [illegible] ತಾಂತ್ರಿಕ ಅಧಿಕಾರಿಯೊಬ್ಬರು [illegible] ಬರಲಿಲ್ಲವೆಂದು [illegible] ಸಿಗೆ ಅವಾಚ್ಯವಾಗಿ [illegible] ಬೈದು ಗಲಾಟೆ ಎಬ್ಬಿಸಿದರು. [illegible] ಸಿದ್ದ; ಮಾತ್ರವಲ್ಲ [illegible] ಬೇಗಾರಿ [illegible] ನ್ಯಾಯಾಧೀಶರು ಅಧಿಕಾರಿ [illegible] ಕ್ಷಮೆ ಕೇಳಿದರು. ಮುಖ್ಯ [illegible].

ಏ. [illegible] ರಂದು ಇಲ್ಲಿ ನಡೆದ ಘಟನಾವಳಿ ಇದು.

ಕೊಪ್ಪದಲ್ಲಿ ಈ ವರ್ಷವೇ

ಪ್ರ. ದ. ಕಾಲೇಜು ಆರಂಭ

ಬಹುಪಾಲು ಖಚಿತ

ಕೊಪ್ಪ: ಇಲ್ಲಿ ಕಲೆ, ವಿಜ್ಞಾನ, ವಾಣಿಜ್ಯ, ವಿಷಯಗಳನ್ನೊಳಗೊಂಡ ಪ್ರಥಮ ದರ್ಜೆ ಕಾಲೇಜಿನ ಸ್ಥಾಪನೆಗೆ ಸರ್ಕಾರದ ಅನುಮತಿ ದೊರಕಿದೆ. ಏ. ೨೪ ರಂದು ಸ್ಥಳ ಪರಿಶೀಲನೆ ನಡೆಸಿದ ಮೈಸೂರು ವಿಶ್ವವಿದ್ಯಾನಿಲಯದ ಅಫಿಲಿಯೇಷನ್ ಸಮಿತಿಯೂ ತೃಪ್ತಿ ವ್ಯಕ್ತಪಡಿಸಿದ್ದು, ಕಾಲೇಜು ಈ ವರ್ಷವೇ ಪ್ರಾರಂಭವಾಗುವುದು ಬಹುಪಾಲು ಖಚಿತವಾದಂತಾಗಿದೆ.

ಏ. ೨೪ ರಂದು ಎಂ. ಡಿ. ಬಾಲಕೃಷ್ಣರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದ ಪ್ರ. ದ. ಕಾಲೇಜು ಸಮಿತಿಯು, ಈ ವರ್ಷವೇ ಮೂರು ವಿಷಯಗಳಲ್ಲಿ ಮೊದಲ ವರ್ಷದ ತರಗತಿಗಳನ್ನು ಆರಂಭಿಸಲು ನಿರ್ಧರಿಸಿದೆ. ಇವಕ್ಕೆ ವಿ. ವಿ. ನಿಲಯದ ಒಪ್ಪಿಗೆ ಮಾತ್ರ ಬೇಕಾಗಿದೆ.

ಆರಂಭಿಕ [illegible] ನಗರ, ಕಟ್ಟಡದ [illegible] (ಬಾಳಗಡಿಯ "[illegible]") [illegible] ಸಮಿತಿ [illegible] ಕೊಳ್ಳುತ್ತಿದೆ, [illegible] ಸಮಿತಿ [illegible].

ಕಾಲೇಜಿಗೆ [illegible] ಪಡೆದುಕೊಳ್ಳಲು [illegible] ಪ್ರಾಧ್ಯಾಪಕರು, ಅಧ್ಯಾಪಕರ [illegible] ಕಾಲೇಜು [illegible] ಸಮಿತಿ [illegible].

ಜಿಲ್ಲೆಯಲ್ಲಿ ಚಿಕ್ಕಮಗಳೂರು ಬಿಟ್ಟರೆ ಸರ್ಕಾರಿ ಕಾಲೇಜು ಇದೊಂದೇ [illegible].

ಗೋಕಾಕ್ ವರದಿ ಅನುಷ್ಠಾನ: ಸಮಸ್ಯೆಯ ಕಲಸು ಮೇಲೋಗರ

ಸರ್ಕಾರ ಕಡೆಗೂ "ಗೋಕಾಕ ವರದಿಯ 'ತಿರುಳನ್ನ' ಅನುಷ್ಠಾನಕ್ಕೆ ತರುವ ಬಗ್ಗೆ ತೀರ್ಮಾನ ತೆಗೆದುಕೊಂಡಿದೆ." ಮತ್ತು ಅದಕ್ಕೆ ಪ್ರತಿಯಾಗಿ ಯಥಾಪ್ರಕಾರ ಎರಡು ನರಬಲಿ (ಕೆಲವು ವರದಿಗಳ ಪ್ರಕಾರ ಮೂರು) ತೆಗೆದುಕೊಂಡಿದ್ದಲ್ಲದೆ, ಅಪಾರ ಆಸ್ತಿಪಾಸ್ತಿ ಹಾನಿಗೆ ಮತ್ತು ಜನಜೀವನ ಅಸ್ತವ್ಯಸ್ತಗೊಳಿಸಲು ಕಾರಣವಾಗಿದೆ.

ಸರ್ಕಾರದ ನಿರ್ಧಾರ

ಎಸ್ ಎಸ್ ಎಲ್ ಸಿ ಮಟ್ಟದಲ್ಲಿ ರಾಜ್ಯದಲ್ಲಿ ಕನ್ನಡವೇ ಏಕೈಕ ಪ್ರಥಮ ಭಾಷೆಯಾಗಬೇಕು ಎಂಬ ಗೋಕಾಕ್ ಸಮಿತಿಯ ಶಿಫಾರ್ಸಿಗೆ ಬದಲು ಕನ್ನಡ ಅಥವಾ ಮಾತೃಭಾಷೆ ೧೫೦ ಅಂಕಗಳ ಪ್ರಥಮ ಭಾಷೆ. ಜೊತೆಗೆ ಇನ್ನಿತರ ಯಾವುದಾದರೂ ೨ ಭಾಷೆಗಳನ್ನು ನೂರು-ನೂರು ಅಂಕಗಳಿಗೆ ಕಡ್ಡಾಯವಾಗಿ ಕಲಿಯಬೇಕು-ಇದು ಸರ್ಕಾರದ ನಿರ್ಣಯದ ಮುಖ್ಯಾಂಶ. ಅಂದರೆ ಕನ್ನಡ ಏಕೈಕ ಪ್ರಥಮ ಭಾಷೆಯಾಗುವುದಿಲ್ಲ. ಆದರೆ ೧೦೦ ಅಂಕಗಳಿಗಾದರೂ ಕಡ್ಡಾಯವಾಗುತ್ತದೆ.

ಸರ್ಕಾರದ ನಿರ್ಣಯದಿಂದ ಏನಾಗಿದೆ? ಎಲ್ಲ ಕಡೆ ಗೊಂದಲ ಮತ್ತು ಅಸಮಾಧಾನ ಉಂಟಾಗಿದೆ. ಕೆಲವರು ಸ್ವಾಗತಿಸಿಯೂ ಇದ್ದಾರೆ, ನಿಜ. ಇನ್ನೂ ಕೆಲವರು ಕಾದುನೋಡುವವರಿದ್ದಾರೆ. ಆದರೆ ಒಟ್ಟಿನಲ್ಲಿ ಇದರಿಂದ ಸಮಸ್ಯೆ ಬಗೆಹರಿದಿರುವುದಕ್ಕಿಂತ ಇನ್ನಷ್ಟು ಸಿಕ್ಕಾಗಿರುವುದು ಸ್ಪಷ್ಟ.

ಆದರೆ ಈ ಇಡೀ ಘಟನಾವಳಿಯಿಂದ ಉಂಟಾಗಿರುವ ಅಪಾರ ಹಾನಿ ಇಷ್ಟೇ ಅಲ್ಲ, ಇನ್ನೂ ಇದೆ.... ...

ಮೊದಲನೆಯದಾಗಿ, ವಿದ್ಯಾರ್ಥಿಗಳಿಗೆ ಹೇರಿರುವ ಹೊಸಹೊರೆ. ಥಿಯರಿ ಭಾಗ ಕಮ್ಮಿ ಮಾಡಿ, ಪ್ರಾಯೋಗಿಕ ಹಾಗೂ ವಾಸ್ತವ ಜೀವನದ ಅನುಭವ ಕೊಡುವ ಹೊರಾಂಗಣ ಕಲಿಕೆಗೆ ಹೆಚ್ಚು ಅವಕಾಶ ಕಲ್ಪಿಸುವಂತೆ ಖ್ಯಾತ ಶಿಕ್ಷಣತಜ್ಞರೂ ವಿಚಾರವಂತರೂ ಈಗಾಗಲೇ ಒತ್ತಾಯಿಸುತ್ತಿದ್ದಾರೆ. ಶಾಲೆಗಳಲ್ಲಿ ಪಾಠ ಮಾಡಲು ಸಿಗುವ ಅವಕಾಶ ಒಂದೇ ಸಮನೆ ಕಮ್ಮಿಯಾಗುತ್ತಿದ್ದು ಅತಿ ಮುಖ್ಯವಾಗಿ ಕಲಿಯಲೇ ಬೇಕಾಗಿರುವ ವಿಷಯಗಳನ್ನೇ ಕಲಿಸಲು ಸಮಯ ಸಾಕಾಗುತ್ತಿಲ್ಲ. ಅದರ ಮೇಲೆ ಈಗ ಬರೀ ಭಾಷೆ ಕಲಿಕೆಗೇ ೩೫೦ ಅಂಕ ಕಡ್ಡಾಯ ಮಾಡಿದರೆ ಓದುವ ಮಕ್ಕಳ ಗತಿ ಏನಾಗಬೇಕು?

ಎರಡನೆಯದಾಗಿ, ಈ ತೀರ್ಮಾನದಲ್ಲಿರುವ ಅಸ್ಪಷ್ಟತೆ ಮತ್ತು ಸಿಕ್ಕು. ಮೂರು ಭಾಷೆಗಳಿಗಾಗಿ ಎಷ್ಟು ರೀತಿಯ ಪಠ್ಯಕ್ರಮ ಮತ್ತು ಪ್ರಶ್ನೆಪತ್ರಿಕೆ ರೂಪಿಸಬೇಕು? ಇರುವ ಒಂದೆರಡು ರೀತಿಯ ಪ್ರಶ್ನೆಪತ್ರಿಕೆಗಳಲ್ಲೇ ಯದ್ವಾತದ್ವಾ ಮಾಡಿಕೊಳ್ಳುವ ನಮ್ಮ ಪರೀಕ್ಷಾ ನಿಯಂತ್ರಣ ವ್ಯವಸ್ಥೆ ಈ ಗೊಂದಲವನ್ನೆಲ್ಲ ಅರಗಿಸಿಕೊಂಡೀತೆ? ಎಷ್ಟು ಮಕ್ಕಳ ಬಾಳು ಇವರ ಕೈಗೆ ಸಿಕ್ಕಿ ಅತಂತ್ರವಾಗಬೇಕು?

ಪ್ರಾರಂಭದಲ್ಲಿ ಚಳುವಳಿ ಅತ್ಯಂತ ಶಾಂತಿಯುತವಾಗಿತ್ತು. ಭಾವೋದ್ವೇಗ ಅತ್ಯಂತ ಕಮ್ಮಿಯಿತ್ತು. ಪ್ರಾಮಾಣಿಕ, ವಸ್ತುನಿಷ್ಠ ಮತ್ತು ತೆರೆದ ಮನಸ್ಸಿನ ಚರ್ಚೆಗೆ ಅವಕಾಶವಿತ್ತು. ಗೋಕಾಕ್ ಸಮಿತಿಯೇ ರಾಜ್ಯದ ವಿವಿಧ ಜನವರ್ಗಗಳನ್ನು ವಿವಿಧ ಅಭಿಪ್ರಾಯಗಳನ್ನು, ವಿವಿಧ ಭಾಷಿಯರನ್ನು ಭೇಟಿಮಾಡಿ, ವ್ಯಾಪಕ ಚರ್ಚೆ ನಡೆಸಿ, ಆಳವಾಗಿ ಚಿಂತನೆ ಮಾಡಿ ಮಂಡಿಟ್ಟ ಶಿಫಾರ್ಸುಗಳ ಮೇಲೂ ಪುನಃ ಚರ್ಚೆ ಮಾಡಬೇಕಾದ ಅಗತ್ಯವಿರಲಿಲ್ಲ. ಆದರೂ ಚರ್ಚೆಗೆ ಬೇಕಾದ ವಾತಾವರಣ ಹಾಳಾಗಿರಲಿಲ್ಲ. ಆದರೆ, ಒಂದು ಸಮಸ್ಯೆ ತೇಲಿಬರುವುದನ್ನೇ ತಮ್ಮ ರಾಜಕೀಯ ಅಂದರೆ ಅಪ್ರಾಮಾಣಿಕ ಉದ್ದೇಶಗಳಿಗಾಗಿ ಬಳಸಿಕೊಳ್ಳಲು ಕಾಯುತ್ತಿರುವ ಸರ್ಕಾರ ಮತ್ತು ರಾಜಕೀಯ ಪಕ್ಷಗಳು ಆಗ ತುಚ್ಛವಾಗಿ ವರ್ತಿಸಿದವೆಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ.

ಅಪ್ರಾಮಾಣಿಕ ಶಕ್ತಿಗಳ ದೈತ್ಯ ನೃತ್ಯ

ಹೀಗೆ ಸಮಸ್ಯೆಯನ್ನು ಸಿಕ್ಕಾಗಲು ಬಿಟ್ಟಿದ್ದರಿಂದ ಎಲ್ಲ ರೀತಿಯ ಅಪ್ರಾಮಾಣಿಕಶಕ್ತಿಗಳೂ ರಾಜಾರೋಷವಾಗಿ ಕೆಲಸ ಮಾಡಲು ಅವಕಾಶವಾಯಿತು. ಭಾಷಾ ಅಲ್ಪಸಂಖ್ಯಾತರಲ್ಲಿ ಭಯ ಮತ್ತು ಅಪನಂಬಿಕೆ ಹುಟ್ಟಿಸಲಾಯಿತು. ಜನಸಾಮಾನ್ಯರನ್ನು ಬಲಿಗೊಟ್ಟು ತಾವು ಸ್ಥಾನ ಗಿಟ್ಟಿಸುವ ರಾಜಕೀಯ ವಿಷ ಕ್ರಿಮಿಗಳು ಹರಿದಾಡಿದವು. ಕಡೆಗೊಮ್ಮೆ, ಅಸ್ಸಾಂ ಚಳವಳಿಯ ವಿಷಯದಲ್ಲಾದಂತೆಯೇ, ಇಡೀ ಸಮಸ್ಯೆ ಮುಸಲ್ಮಾನರ ಮೇಲೆ ಕೇಂದ್ರೀಕೃತವಾಯಿತು. ಮೊದಲೇ ಒಡೆದ ಕೋಮು ಸಂಬಂಧದ ಹಾಲು ಈಗ ಹುಳಿತು ರಾಡಿಯಾಯಿತು. ಸಂಯಮ ಗಾಳಿಗೆ ತೂರಿತು. ಸಂಸ್ಕೃತ ಪ್ರೇಮದ ಗುಳ್ಳೆಬ್ಬಿಸಿ, ವರದಿಯ ಅನುಷ್ಠಾನಕ್ಕೆ ಮೊಟ್ಟ ಮೊದಲು ಅಡ್ಡಗಾಲಿಟ್ಟವರೇ ಈಗ ಗೋಕಾಕ್ ವರದಿಯ ಪ್ರಚಂಡ ಬೆಂಬಲಿಗರಾದರು. (ಈ ಸಂಸ್ಕೃತ ಪ್ರೇಮ ಕೂಡ ಪ್ರಾಮಾಣಿಕವಾದದ್ದಲ್ಲ ಎಂದು ನನ್ನ ಅನಿಸಿಕೆ. ಈ ಬಗ್ಗೆ ಇನ್ನೊಮ್ಮೆ ಚರ್ಚಿಸುತ್ತೇನೆ.) ಈ ನಡುವೆ, ವರದಿಯ ಕೆಲವಂಶಗಳ ಬಗ್ಗೆ ಎದ್ದ ಕೆಲವು ಸಂದಿಗ್ಧ ಪ್ರಶ್ನೆಗಳು ಭಾವೋದ್ವೇಗ ಮತ್ತು ಪರಸ್ಪರ ದೋಷಾರೋಪಣೆಯ ಬಿರುಗಾಳಿಯಲ್ಲಿ ದಿಕ್ಕಾಪಾಲಾದವು.

ಹೀಗೆ, ಕೇವಲ ಬೇರೆ ಬೇರೆ ಕೋಮುಗಳವರಷ್ಟೇ ಅಲ್ಲ, ಒಂದೇ ಅಭಿಪ್ರಾಯದವರೂ ಸಹ ಪರಸ್ಪರ ಅಪನಂಬಿಕೆ ಮತ್ತು ವಿರೋಧ ಹುಟ್ಟುಹಾಕಿಕೊಂಡಿದ್ದಾರೆ. ಇದೆಲ್ಲ ಪೂರ್ತಿ ಅಳಿಸುವುದು ಸಾಧ್ಯವೇ? ಕೋಮು ವಿದ್ವೇಷದ ಕೊಡ ಇಂಥ ಒಂದೊಂದು ಸಂದರ್ಭದಿಂದಲೂ ಮತ್ತಷ್ಟು ತುಂಬುತ್ತಿದೆಯೇ ವಿನಃ ಬರಿದಾಗುತ್ತಿಲ್ಲ. ಜನರೊಳಗಿನ ಬಿರುಕು ಒಡಕು ಮತ್ತಷ್ಟು ಕಂದಕವಾಗುವುದೇ ನಮ್ಮನ್ನಾಳುವವರ ಉದ್ದೇಶವೆ?

ಗಾಯಕ್ಕೆ ಉಪ್ಪು

ಇಷ್ಟೆಲ್ಲಾ ಆದಮೇಲೂ ನಮ್ಮ ಮುಖ್ಯಮಂತ್ರಿಗಳು—"ಇದೆಲ್ಲ ಕೋಮುವಾದಿಗಳ ಕೃತ್ಯ. ಇದು ಕೇವಲ ಕಾನೂನು ಮತ್ತು ಶಿಸ್ತುಪಾಲನೆಯ ವಿಷಯ ಮಾತ್ರ. ಶಾಂತಿ ಸುವ್ಯವಸ್ಥೆ ಕೆಡಿಸುವವರನ್ನು ನಿರ್ದಾಕ್ಷಿಣ್ಯವಾಗಿ ಶಿಕ್ಷಿಸುತ್ತೇವೆ" ಎಂದು, ಉರಿವ ಗಾಯಕ್ಕೆ ಉಪ್ಪು ಸವರಿದ್ದಾರೆ. ಕನ್ನಡ ಕಲಿಕೆ ಕಡ್ಡಾಯವಾಗಬೇಕು ಎಂಬುದು ಲಕ್ಷಾಂತರ ಅಲ್ಲ ಕೋಟ್ಯಾಂತರ ಕನ್ನಡಿಗರ ಪ್ರಾಮಾಣಿಕ ಆಶೋತ್ತರವಾಗಿತ್ತು, ಆಗಿದೆ. ಅದು ಬೇಡ ಎಂದ ಜನ ಕೇವಲ ಕೆಲವು ನೂರು ಅಥವಾ ಸಾವಿರ ಸಂಖ್ಯೆಯವರು (ಮುಸಲ್ಮಾನರಲ್ಲಿ ಅಥವಾ ಇತರ ಭಾಷಾ ಅಲ್ಪಸಂಖ್ಯಾತರಲ್ಲಿ ಪ್ರಜ್ಞಾವಂತರು ಮೊದಲಿಂದ ಈವರೆಗೂ ವರದಿಗೆ ಬೆಂಬಲ ಕೊಟ್ಟಿದ್ದಾರೆ.) ಅವರನ್ನು ತಿದ್ದಲಾರದ, ಮನವೊಲಿಸಲಾಗದ ಸರ್ಕಾರ ಈ ಕೋಟ್ಯಾಂತರ ಮಂದಿಯನ್ನು ತನ್ನ ರಾಜಕೀಯ ಕುತಂತ್ರದ ಬೆಂಕಿಯಲ್ಲಿ ಎಷ್ಟು ಹೊತ್ತಾದರೂ ಕೆಂಪಗೆ, ಕರ್ರಗೆ ಹುರಿಯಲು ತಯಾರಿದೆ—ಎನ್ನಿಸುತ್ತದೆ.

ಬಯಲಾದ ಅಪ್ರಾಮಾಣಿಕರು

ಸರ್ಕಾರ ಈಗ ತೆಗೆದುಕೊಂಡಿರುವ ನಿರ್ಧಾರವಾದರೂ ಪ್ರಾಮಾಣಿಕವಾದದ್ದೆನ್ನಲು ಏನೇನೂ ಆಧಾರ ಸಾಲದು. ಕನ್ನಡ ಭಾಷೆಯನ್ನು ಎಲ್ಲರೂ ಕಡ್ಡಾಯವಾಗಿ ಅಷ್ಟೋ ಇಷ್ಟೋ ಕಲಿಯುತ್ತಾರೆಂಬ ಒಂದು ಅಂಶ ಬಿಟ್ಟರೆ, ಗೋಕಾಕ್ ಸಮಿತಿಯ ಇನ್ನಾವ ಆಶಯವೂ ಸಿದ್ಧಿಸಿಲ್ಲ. ಸದ್ಯಕ್ಕಂತೂ ಬೀಸುವ ದೊಣ್ಣೆ ತಪ್ಪುತ್ತಲ್ಲ. ಮುಖ್ಯ ಪ್ರಶ್ನೆ ಎದುರಾಗುವುದು ಹೇಗೂ ಆಲ್‌-ಅರ್ಕೃಷ್ಟೆ! ಅಲ್ಲೀತನಕ ನಾವು..." ಎಂಬಂಥ ಮನೋಭಾವವೇ ಎದ್ದು ಕಾಣುತ್ತದೆ. ಅಂತೂ ಈ ಚಳುವಳಿ ಮತ್ತು ವಿವಾದದಿಂದಾಗಿ ಹಲವಾರು ರೀತಿಯ ಅಪ್ರಾಮಾಣಿಕರು ಬಯಲಾದರು.

ಭಾವೋದ್ವೇಗ ಬೇಡ; ನರಬಲಿ ತಪ್ಪಿಸಲು ನೆರವಾಗಿ.

ಈಗಲಾದರೂ ಕಾಲ ಮಿಂಚಿಲ್ಲ. ಇನ್ನೂ ಚರ್ಚೆಯಾಗಬೇಕಿದ್ದರೆ, ಪ್ರಾಮಾಣಿಕ ಪ್ರಯತ್ನ ಮಾಡಲು ಅವಕಾಶವಿದೆ. ಯಾರೂ ಸರ್ಕಾರವಾಗಲಿ ಭಾಷಾ ಅಲ್ಪಸಂಖ್ಯಾತರಾಗಲಿ, ಚಳುವಳಿಕಾರರಾಗಲಿ -ಇದನ್ನು ಘನತೆಯ ಪ್ರಶ್ನೆಯಾಗಿ ಪರಿಗಣಿಸದೆ ಮಾನವತೆಯ ಸಮಸ್ಯೆಯಾಗಿ ನೋಡಿ. ಅತ್ಯಂತ ಸರಳವಾದ ಸಮಸ್ಯೆಯೊಂದು ನರಬಲಿ ಕೊಳ್ಳುವಂಥ, ಇನ್ನೂ ಹತ್ತಾರು-ನೂರಾರು ವರ್ಷ ಕೊಳ್ಳುತ್ತಲೇ ಹೋಗುವಂಥ ಪರಿಸ್ಥಿತಿ ಉಂಟಾಗುವುದನ್ನು ಯಾವುದೇ ಬೆಲೆ ತೆತ್ತು ತಪ್ಪಿಸಿ. ಭಾವೋದ್ವೇಗ ಬಿಟ್ಟು, ಪಟ್ಟು, ಛಲ ಕೈಬಿಟ್ಟು, ವಸ್ತುಸ್ಥಿತಿಗೆ ಉತ್ತರಿಸಿ, ಸಾಕು.

-ಸಂಪಾದಕ.

"ಆರ್ಥಿಕ ಮುಗಟ್ಟು!"

ಇದ್ದಕ್ಕಿದ್ದಂಗೆ ಸಂತೆ ಮಾರ್ಕೆಟ್ಟಾಗೆ ಮಳೆ ಬಿದ್ದು ಗೇಟ್ ಬಾಗಿಲವರೆಗೆ ಗಟಾರದ ನೀರು ಹರಿದಾಗ ಎಣ್ಣೆ ಮಾರುವವ ಗಟ್ಟಿಯಾಗಿ ಅತ್ತನಂತೆ. ಎಣ್ಣೆಯವ ಅತ್ತಾನಲ್ಲ ಅಂತ ಉಪ್ಪಿನವ ಅತ್ನಂತೆ. ಅವನನ್ನ ನೋಡಿ ತೆಂಗಿನ ಕಾಯಿಯವ ಬಿದ್ದು ಬಿದ್ದು ಅತ್ತನಂತೆ.—ಹಾಗೆ ಆಗಿದೆ ಈ ನಮ್ಮ ಪರಿಸರದಲ್ಲಿ. ಅಡಿಕೆ ಬೆಳೆಗಾರರಿಗೆ ಸರಿಯಾದ ಸಮಯದಲ್ಲಿ ಏಟು ಬಿದ್ದು ಮದುವೆ ಮುಹೂರ್ತ ಮಾಡೋರೆಲ್ಲ ಧನಸ್ಸು ಕೆಳಗೆ ಹಾಕಿ ಕೂತ ಪರಿಣಾಮ ಬೇರೆಯವರಿಗೆ ಷಾಕ್ ಕೊಟ್ಟು ಇನ್ನು ಕೆಲವರಿಗೆ ಕಿಕ್ ಕೊಟ್ಟಿತಂತೆ. ಪ್ರಿಂಟಿಂಗ್ ಪ್ರೆಸ್ಸಿನವರು, ಓಲಗದವರು, ಚಾಸಿಂಗ ತಯಾರಿಸೋರು, ಬಾಳೆಯೆಲೆ ಮಾರುವವರು, ಪುರೋಹಿತರು ಅಡಿಗೆಯವರು, ಬಸ್ಸಿನವರು, ಛತ್ರದವರು, ಎಲ್ಲ ಬಾಯಿಬಡಕೊಂಡು ಅಳತೊಡಗಿದಾಗ ರಿಸರ್ವ್ ಬ್ಯಾಂಕಿನೋರು ತಮ್ಮ ವಜ್ರಮುಷ್ಠಿಯನ್ನು ತುಸು ಸಡಿಲ ಮಾಡಿದ್ರೇ ತಡ—ಕೃಷಿಸಾಲ, ವ್ಯಾಪಾರಿ ಸಾಲ, ಅಭಿವೃದ್ಧಿ ಸಾಲ, ಕೆರೆ-ಕಟ್ಟೆ, ಬಾವಿ, ಪಂಪು, ಷೆಡ್ಡು, ಮೋಟಾರು, ಮನೆ-ಮಠ ಮಂಡಿ, ಹೀಗೆ (ತೂಬ್ ಕಿತ್ತೋರ್‌ನಂತೆ) ಸಾಲದ ಅರ್ಜಿ ಮೇಲರ್ಜಿಗಳು ಬಂದು ಮಗಳ ಮದ್ವೇಗೆ ದಿವ್ಸ ಇಟ್ಟೇ ಬಿಟ್ರಂತೆ. ಜೈ ಮಹಾಜನ್, ಜೈ ಭೋಜನ್. ಎಂದು ಉದ್ಗಾರವೆತ್ತಿ ಉಂಡು ತೇಗಿಕೊಂಡು ಹೋದರಂತೆ.

—ವಕ್ರತುಂಡ

ಓದುಗರ ಪ್ರತಿಕ್ರಿಯೆ

ಸ್ತ್ರೀ ರಾಷ್ಟ್ರದ ಆಧಾರ ಶಕ್ತಿ

ಶ್ರೀಮತಿ ಶಾರಾ ಪ್ರಸಾದ್, ಬಸವಾನಿ.

[ಶ್ರೀಮತಿ ಹೆಚ್. ಎಸ್. ಎನ್. ರತ್ನರವರ 'ಗ್ರಾಮೀಣ ಮಹಿಳೆಯರ ಸಂಘಟನೆ...' ಲೇಖನ ('ದೀವಟಿಗೆ',೨೧.೩.೮೩) ೯-೪-೮೩ರ 'ತುಂಗಾವಾರ್ತೆ'ಯಲ್ಲಿ ಮರು ಪ್ರಕಟಿತವಾಗಿತ್ತು. ಆ ಪತ್ರಿಕೆಯಲ್ಲಿ ಬಂದ ಓದುಗರ ಪ್ರತಿಕ್ರಿಯೆ ಇದು.]

ಶ್ರೀಮತಿ ರತ್ನಾರವರ ಲೇಖನವನ್ನು ನೋಡಿದೆವು. ಅದಕ್ಕೆ ಪ್ರತಿಕ್ರಿಯೆಯನ್ನು ಈ ರೀತಿ ಸೂಚಿಸಲು ಬಯಸುತ್ತೇವೆ. ಇದು ಕೇವಲ ಪ್ರತಿಕ್ರಿಯೆಯೇ ಹೊರತು ಲೇಖಕಿಯರ ಮನಸ್ಸಿಗೆ ನೋವು ಮಾಡುವುದಕ್ಕಲ್ಲವೆಂಬುದನ್ನು ತಿಳಿಸುತ್ತೇವೆ.

ಶ್ರೀಮತಿ ರತ್ನಾರವರು ತಮ್ಮ ಲೇಖನವು ೧೯೬೮ರಲ್ಲಿ ಅನುಭವಿಸಿದ ಘಟನೆ ಎಂದು ತಿಳಿಸಿದ್ದಾರೆ. ನಮಗೆ ತಿಳಿದ ಹಾಗೆ ಅವರ ಲೇಖನದ ಇರವು ಎರಡು ದಶಕಗಳ ಹಿಂದಿನದೇ ಇರಬಹುದು. ಅಥವಾ ಅವರ ಅನುಭವ ಸಾರ್ವತ್ರಿಕವಾಗುವುದಿಲ್ಲ ಎಂಬ ಅನಿಸಿಕೆ ನಮಗೆ. ಏಕೆಂದರೆ ನಾವು ಇವೇ ಈಗ ಮಹಿಳಾ ಸಂಘಟನೆ ಯಶಸ್ವಿಯಾಗಿ ನೆರವೇರಿಸಿದ್ದೇವೆ. ಇದಕ್ಕೆ ಅನೇಕ ಮಹನೀಯರು ಸಹಕರಿಸಿದ್ದಾರೆ.

ಶ್ರೀಮತಿ ರತ್ನಾರವರ "ಶಿಕ್ಷಣವೇ ಸ್ತ್ರೀ ಸಂಘಟನೆಗೆ ಮುಖ್ಯ. ಅದಿಲ್ಲದೆ ಯಾವ ರೀತಿಯಲ್ಲೂ ಪ್ರಯೋಜನವಾಗುವುದಿಲ್ಲ" ಎನ್ನುವ ವಾದವನ್ನು ನಾವು ಒಪ್ಪುವುದಿಲ್ಲ. ಶಿಕ್ಷಣ ಬೇಕು, ನಿಜ. ಆದರೆ ಕೇವಲ ವಿದ್ಯಾಭ್ಯಾಸವೇ ಶಿಕ್ಷಣವಲ್ಲ ಅಥವಾ ಸ್ಕೂಲುಗಳಲ್ಲಿ ಓದುವುದೇ ಶಿಕ್ಷಣವಲ್ಲ. ಮಹಿಳೆಯರ ಮನವೊಲಿಸಿ ಅವರಿಗೆ ಜೀವನದಲ್ಲಿ ಶಿಸ್ತು, ಗುರಿ, ಧ್ಯೇಯಗಳನ್ನು ಅವರೊಡನೆಯೇ ಕೆಲವು ಕಾಲ ಕಳೆದು ಕಲಿಸಿದರೆ ಅದೂ ಶಿಕ್ಷಣವಲ್ಲವೇ? ಅದಕ್ಕೆ ೨೦ ವರ್ಷ ಕಾಲ ಬೇಕು ಎನ್ನಿಸುವುದಿಲ್ಲ. ಅದಕ್ಕೆ ಈಗಿನ ಕಾಲದ ಗಂಡಸು ಶ್ರೇಷ್ಠರು ತಮ್ಮ ಒಪ್ಪಿಗೆ ನೀಡುವುದು ಕಷ್ಟವಲ್ಲ.

ಮಹಿಳಾ ಮಂಡಲಗಳ ಹಾಗೂ ಯುವತಿ ಮಂಡಲಗಳ ಸಂಘಟನೆಯ ಮೂಲಕ ಮಹಿಳೆಯರನ್ನು ಸಂಘಟಿಸುವುದು ಅಸಾಧ್ಯ ಎನ್ನುವ ಲೇಖಕಿಯರು ಸ್ತ್ರೀ ಸಂಘಟನೆಯ ಮುಖ್ಯ ಉದ್ದೇಶ ಹಳ್ಳಿಯ ಬಡವ-ಬಲ್ಲಿದರೆಂಬ, ಮೇಲು-ಕೀಳೆಂಬ ಭೇದಭಾವನೆಯನ್ನು ದೂರಮಾಡುವುದು ಎಂಬುದನ್ನು ತಿಳಿದಿಲ್ಲವೇ? ಲೇಖಕಿಯವರು ಹೇಳುವಂತೆ ಬಡವರು ಸಾಧ್ಯವಿಲ್ಲ ಎಂದರೂ ಸಹ ಈ ಸಂಘಟನೆಯಿಂದ ಆಗುವ ಪ್ರಯೋಜನವನ್ನು ಮನ ಮುಟ್ಟುವಂತೆ ತಿಳಿಸಿದರೆ ಏಕೆ ಸಾಧ್ಯವಿಲ್ಲ? ನಮಗೆ ತಿಳಿದಹಾಗೆ ಎಷ್ಟೋ ಬಡ ಮಹಿಳೆಯರು ಮಹಿಳಾ ಮಂಡಲಗಳಲ್ಲಿ ಪ್ರಯೋಜನ ಪಡೆದಿರುವುದರಿಂದ ಅವರೇ ಮಹಿಳಾ ಮಂಡಲಕ್ಕೆ ಸಹಕರಿಸುವರೆಂಬುದು ನಮಗೆ ಕಂಡುಬಂದ ಪ್ರತ್ಯಕ್ಷ ನಿದರ್ಶನ. ಆರ್ಥಿಕ ಲಾಭ ನ್ಯಾಯಯುತವಾಗಿ ನಡೆಯುತ್ತಿರುವುದನ್ನು ಮನಗಂಡು ಗಂಡಸರನ್ನು ಒಪ್ಪಿಸಬಹುದು.

ಗ್ರಾಮಾಂತರ ಪ್ರದೇಶದ ಮಹಿಳಾ ಸಮಾಜಗಳು ಹಿಂದಿನ ಹಾಡು-ಹಸೆ, ವರಮಹಾಲಕ್ಷ್ಮಿ ಪೂಜೆಯಂತಹ ಗೊಡ್ಡು ಸಂಪ್ರದಾಯದಲ್ಲೇ ತೊಡಗಿದ್ದಾರೆ ಎಂಬುದನ್ನು ಹೇಳುವ ಲೇಖಕಿಯರು ಮುಂದುವರಿದ(?) ಶ್ರೀಮಂತ ಮಹಿಳೆಯರು ಸಂಘಟಿತರಾಗಿ (ಕ್ಲಬ್‌ಗಳಲ್ಲಿ) ಹೌಸಿ-ಹೌಸಿ ಆಟವಾಡುವ ಕಾರ್ಯದಲ್ಲಿ ತೊಡಗಿರುವುದನ್ನು ಏಕೆ ಕಾಣುತ್ತಿಲ್ಲ?

ಗ್ರಾಮೀಣ ಮಹಿಳೆಯರು ಹಿಂದಿನ ಅರ್ಥಹೀನ ಸಾಂಪ್ರದಾಯಿಕ ಸಂಸ್ಕೃತಿಗೆ ಹೆಚ್ಚಿನ ಬೆಂಬಲ ನೀಡುತ್ತಾರೆ ಎಂದು ಬರೆದ ಲೇಖಕಿಯರಿಗೆ ಈಗಿನ ಕಾಲದಲ್ಲಿ ನಡೆವ ಎಷ್ಟೋ ಅತ್ಯಾಚಾರದಲ್ಲಿ ಗೊಡ್ಡು ಸಂಪ್ರದಾಯವೂ ಕಾರಣವಾಗಿರುವುದೂ ಮುಖ್ಯ ಕಾರಣ ಎಂಬುದನ್ನು ತಿಳಿಯಬಹುದು.

ಅದೆಲ್ಲಾ ಇರಲಿ, ವಾದ-ವಿವಾದವೇಕೆ? ಸ್ತ್ರೀಯರು ಈಗ ಸಂಘಟಿತರಾಗುವುದು ಲೇಖಕಿಯರು ಹೇಳುವಷ್ಟು ಕಷ್ಟವಲ್ಲ. ಹೊಸ ಸಂಪ್ರದಾಯಕ್ಕೆ ಒಲಿಯಾಗಿ ಅತಿ ಮುಂದುವರಿದವರು ಎಂ.ಎ. ಶಿಕ್ಷಣವನ್ನು ಪಡೆದ, ಸ್ವೇಚ್ಛಾಚಾರವೇ ಸ್ವಾತಂತ್ರ್ಯವೆಂದು ತಿಳಿದ ಆಧುನಿಕ ಮಹಿಳೆಯರು ಸಮ್ಮತಿಸಿದ್ದಾರೆ. ಹಾಗೆಯೇ ಹಳ್ಳಿಯಲ್ಲೇ ಹಿಂದುಳಿದು ಬದುಕಿಗೆ ಅರ್ಥವೇ ಕೊಡದವರೂ ನಮ್ಮಲ್ಲಿದ್ದಾರೆ. ಆದರೆ ನಾವು ಮುಂದುವರೆದು ಬೇಕಾದರೆ ಮನುವಿನ ವಾಕ್ಯವನ್ನು ಅಲ್ಲಗಳೆದು ಅಥವಾ ಮನನ ಮಾಡಿಕೊಂಡು ಮಾತ್ರಕ್ಕೆ ಮುಂದುವರಿದವರಾಗುವುದಿಲ್ಲ. ಸ್ತ್ರೀಯರೆಲ್ಲರೂ ಮನಸ್ಸು ಮಾಡಿದರೆ ಗಂಡಸರನ್ನು ಒಪ್ಪಿಸುವುದೇನೂ ಕಷ್ಟವಲ್ಲ.

ಸ್ತ್ರೀಯರೆಲ್ಲರೂ ಮನೆಯ ಕರ್ತವ್ಯವನ್ನು ಮಾಡಿಕೊಂಡು, ತಮ್ಮ ಸುತ್ತಮುತ್ತಲಿನವರ ನೋವು, ನಲಿವುಗಳಲ್ಲಿ ಭಾಗಿಯಾಗಬಹುದು. ಮನೆಬಿಟ್ಟು ಹೊರಗೆ ತಿರುಗಿದರೇ ಸ್ವಾತಂತ್ರ್ಯ ಎಂದುಕೊಳ್ಳಬೇಕಿಲ್ಲ. ಅವಶ್ಯಕವಿದ್ದರೆ, ಸರಿಯಾದ ದಾರಿಯಲ್ಲಿ ನಡೆಸಲು ಆತ್ಮವಿಶ್ವಾಸವಿದ್ದರೆ ಹೊರಗೂ ತಿರುಗಬಹುದು. ಇದರ ನೋವಿನ ಓರೆಯ ವಿಶಾಲ ಭಾವನೆ ನಮ್ಮದಾಗಬೇಕು. ಆಗ ಸಂಘಟನೆ ತನಗೆ ತಾನೇ ಉಂಟಾಗುತ್ತದೆ. ಇದಕ್ಕೆ ಹೆಚ್ಚಿನ ಶಿಕ್ಷಣ ಬೇಕಿಲ್ಲ. ತನ್ನ ದಿನದ ಅವಧಿಯಲ್ಲಿ ಒಂದು ಘಂಟೆ ಕಾಲ ಹೊರಗಿನವರೊಡನೆ ಕಳೆದು, ಮಾತನಾಡಿ, ತನ್ನ ಸುತ್ತಮುತ್ತಲಿರುವವರಿಗ ಸಂತೋಷಪಡಿಸುವಂತೆ, ತೊಂದರೆಯಾಗದಂತೆ ಬದುಕುವುದನ್ನು ಕಲಿತು ತನ್ನ ಮಕ್ಕಳನ್ನು ಅದೇ ರೀತಿ ಬೆಳೆಸಿ, ಉತ್ತಮ ಸಂಸ್ಕಾರ ಪಡೆಯುವಲ್ಲಿ ಸಹಕರಿಸಿದರೆ ಇದೇ ಸ್ತ್ರೀ ಸಂಘಟನೆಯಲ್ಲವೇ? ❋

'ಒನ್ ಜೈ ಟೂ ಗಾದಿ' ಹಿನ್ನೆಲೆ ಕುರಿತು ಸ್ಪಷ್ಟನೆ

"ರಾಜೀನಾಮೆ ಕೊಡಲು ಹಿಂದೇಟು ಹಾಕಿಲ್ಲ"

'ದೀವಟಿಗೆ' ಸಂಪಾದಕರಿಗೆ-

ಮಾನ್ಯರೆ,

ದಿನಾಂಕ ೧೧-೪-೮೩ರ 'ದೀವಟಿಗೆ' ಸಂಚಿಕೆಯಲ್ಲಿ [ಒನ್ ಜೈ ಟೂ ಗಾದಿ!] ಕಾಲಂ ನೋಡಿ ನನಗೆಲ್ಲರಿಗೂ ಅತೀವ ಆಶ್ಚರ್ಯವಾಯಿತು. ನಿಮ್ಮ ವರದಿ ಸರಿಯಾದ ಮಾಹಿತಿಯಿಂದ ಕೂಡಿಲ್ಲ. ಆದ್ದರಿಂದ ಆ ಬಗ್ಗೆ ಈ ಕೆಳಗಿನ ಸ್ಪಷ್ಟ ಚಿತ್ರ ನೀಡುತ್ತೇನೆ.

ಪುರಸಭಾ ಉಪಾಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ (ಐ) ಸ್ಪರ್ಧಿಯಾಗಿ ಟಿ. ಎಸ್. ನಾಗರಾಜಶೆಟ್ಟಿಯವರನ್ನು ಉಮೇದುವಾರರಾಗಿ ಪಕ್ಷ ನಿಲ್ಲಿಸಿತು. ಪಕ್ಷದ ಸಭೆಯಲ್ಲಿ ಎರಡೂವರೆ ವರ್ಷದ ನಂತರ ರಜಾಕ್ ಸಾಹೇಬರನ್ನು ಪಕ್ಷದ ಪರವಾಗಿ ಉಮೇದುವಾರರಾಗಿ ನಿಲ್ಲಿಸುವಂತೆ [ಎರಡು ವರ್ಷದಲ್ಲಿ ಎರಡೂವರೆ ವರ್ಷ ಟಿ. ಎಸ್. ನಾಗರಾಜ ಶೆಟ್ಟಿ; ತದನಂತರದ ಎರಡೂವರೆ ವರ್ಷ ರಜಾಕ್ ಸಾಹೇಬ್] (ಐ) ಪಕ್ಷದ ತೀರ್ಮಾನ. ಟಿ. ಎಸ್. ನಾಗರಾಜ ಶೆಟ್ಟಿಯವರು ಅವಿರೋಧ ಆಯ್ಕೆಯಾಗಿ ಬಂದವರಲ್ಲ. ಅವರ ಸ್ಪರ್ಧಿ ಶ್ರೀ ಸೈಯದ್ ಅಹಮದ್. ಟಿ. ಎಸ್. ನಾಗರಾಜ ಶೆಟ್ಟಿಯವರು ತಮ್ಮ ಸ್ಥಾನಕ್ಕೆ ರಾಜಿನಾಮೆ ಕೊಡಲು ಕಳೆದ ೬ ತಿಂಗಳಿಂದ ತಯಾರಿದ್ದು, ಕಾಂಗ್ರೆಸ್ (ಐ) ಕಮಿಟಿಯಲ್ಲಿ ಹೇಳಿರುತ್ತಾರೆ. ಆದರೆ ಚಕಮಕಿ ನಡೆದ ವಿಚಾರದ ಸ್ಪಷ್ಟನೆ ಈ ಕೆಳಕಂಡಂತಿದೆ—

ತಾರೀ ೮-೪-೮೩ ರಂದು ನಡೆದ ಪುರಸಭೆಯ ಮಾಸಿಕ ಸಭೆಯಲ್ಲಿ ಮೀಟಿಂಗ್ ನಡೆಯುವಾಗ ರಬಿಬುಲ್ಲಾ ಹುಸೇನಿ (ಇಂಡಿಪೆಂಡೆಂಟ್) ಎಂಬ ಸದಸ್ಯರು ನಾಗರಾಜ ಶೆಟ್ಟಿಯ ರಾಜಿನಾಮೆಯ ಬಗ್ಗೆ ಪ್ರಸ್ತಾಪಿಸಿದಾಗ, ನಾಗರಾಜಶೆಟ್ಟಿರು, ಈ ವಿಚಾರ ನನ್ನ ಕಾಂಗ್ರೆಸ್ (ಐ) ಪಕ್ಷದ ವಿಚಾರವೇ ವಿನಃ, ಪುರಸಭೆಯ ಮೀಟಿಂಗ್‌ನಲ್ಲಿ ಪ್ರಸ್ತಾಪಿಸುವ ವಿಚಾರವಲ್ಲ ಎಂದು ಹೇಳಿದರು. ಆಗ ರಬಿಬುಲ್ಲಾ ಹುಸೇನಿಯವರು ಕ್ಷಮಾಪಣೆಯನ್ನು ನಾಗರಾಜಶೆಟ್ಟಿಯವರಲ್ಲಿ ಕೇಳಿದರು.

ಇದು ಸತ್ಯವಾದ ವಿಚಾರ. ಆದರೆ ನಿಮ್ಮ ಪತ್ರಿಕೆಯಲ್ಲಿ ಬೇರೆ ಅರ್ಥ ಬರುವ ಹಾಗೆ ಬಂದಿದೆ. ಆದ್ದರಿಂದ ಈ ಮೇಲ್ಕಂಡ ಸಂಗತಿಯನ್ನು ತಿಳಿಸಿದ್ದೇನೆ.

ಇಂತು,

ಟಿ. ಎಸ್ ನಾಗರಾಜಶೆಟ್ಟಿ ರ

ನೆ. ರಾ. ಪುರ. ಅಭಿಮಾನಿಗಳು

ಕ್ಯಾಂಪ್ಕೋ: ಅಡಿಕೆ ಬೆಳೆಗಾರರ ಹಿತರಕ್ಷಣೆಯೇ ಗುರಿ

ದೇಶದಲ್ಲಿ ಉತ್ಪತ್ತಿಯಾಗುತ್ತಿರುವ ಅಡಿಕೆಯ ಮುಕ್ಕಾಲು ಭಾಗ (ಶೇ. ೭೬) ಕರ್ನಾಟಕ ಮತ್ತು ಕೇರಳ ಈ ಎರಡು ರಾಜ್ಯಗಳಲ್ಲೇ ಬೆಳೆಯುತ್ತದೆ. ಈ ಎರಡು ರಾಜ್ಯಗಳಲ್ಲಿ ಒಟ್ಟು ೩೦ ಲಕ್ಷ ಜನ ಈ ಬೆಳೆಯನ್ನು ಅವಲಂಬಿಸಿದ್ದಾರೆ— ಬೆಳೆಗಾರರು ಮತ್ತು ಕೃಷಿ ಕಾರ್ಮಿಕರು ಸೇರಿ. ಎರಡೂ ರಾಜ್ಯಗಳಲ್ಲಿ ಸಮ ಪ್ರಮಾಣ ಉತ್ಪತ್ತಿಯಾಗುತ್ತಿದ್ದರೂ, ಕೇರಳದಲ್ಲಿ ಕಾಸರಗೋಡು ಜಿಲ್ಲೆಯಿಂದಾಚೆ ಅಡಿಕೆ ಒಂದು ಉಪ ಬೆಳೆ ಮಾತ್ರ; ಆದರೆ ಕರ್ನಾಟಕದ ಬೆಳೆ ಪ್ರದೇಶದಲ್ಲಿ ಇದೇ ಒಂದು ಮುಖ್ಯ ಬೆಳೆ. ನಮ್ಮ ಈ ಭಾಗದಲ್ಲಿ ಶೇ. ೯೦ ಭಾಗ ಜನ ಅಡಿಕೆ ಬೆಳೆಯನ್ನು ಅವಲಂಬಿಸಿದ್ದಾರೆ.

೧೯೬೮-೬೯ರಲ್ಲಿ ಅಡಿಕೆಯ ಧಾರಣೆ ಕುಸಿಯತೊಡಗಿ, ೭೦-೭೩ರ ಹೊತ್ತಿಗೆ ಪರಿಸ್ಥಿತಿ ಮಧ್ಯವರ್ತಿಯಾಗಿ [illegible] ವಿಧಾನ ಸಭೆ ಸಂಸತ್ತುಗಳಲ್ಲೂ ಚರ್ಚೆ; ಸರ್ಕಾರದಿಂದ ಪರಿಹಾರ ಕ್ರಮದ ಭರವಸೆ.

ಆದರೆ ಸರ್ಕಾರವನ್ನು ಅವಲಂಬಿಸದೆ ಬೆಳೆಗಾರರ ಹಿತರಕ್ಷಣೆ ಬೇಗೆ ಮಾಡಬಹುದು ಎಂಬ ಬಗ್ಗೆ ಕೆಲವರು ಆಲೋಚಿಸತೊಡಗಿದರು. ಶಿವಮೊಗ್ಗ ಜಿಲ್ಲೆಗಳಲ್ಲಿ ಇಂಥವರು ಕೆಲವರು ಸಭೆ ನಡೆಸಿ ಸಮಾಲೋಚಿಸಿದರು. ಅದು ಮುಂದೆ [illegible] ಮಂತ್ರಿ, ಶಾಸಕ, ಎಂ. ಪಿ. [illegible] ಗೆಂಡು ಸಾಗದಿದ್ದರೂ [illegible] ನಡೆಯಿತು.

ಸಹಕಾರಿ ರಂಗದಲ್ಲಿ, ಸರ್ಕಾರದ ಹಣ ಸಹಾಯದೊಂದಿಗೆ ಒಂದು ಸಂಘ [illegible] ಅಡಿಕೆಯನ್ನು ಕೊಳ್ಳುವುದು-ಮಾರುವುದು ಎರಡನ್ನೂ ನಿರ್ವಹಿಸಲು ಸಾಧ್ಯವಾದರೆ ಯಶಸ್ವಿಯಾಗಬಹುದೆಂಬ ಅಭಿಪ್ರಾಯ. ಎರಡೂ ರಾಜ್ಯಗಳಿಗೆ ಒಟ್ಟಾಗಿ ಸಂಘ ರಚಿಸುವ ತೀರ್ಮಾನ. ಆಗಿನ ಕೃಷಿ ಮಂತ್ರಿ ಕೆ. ಹೆಚ್. ಪಾಟೀಲರಿಂದ ಪೂರ್ಣ ಬೆಂಬಲದ ಭರವಸೆ.

ಕೇರಳ ಸರ್ಕಾರದ ಸಹಕಾರ, ಸಂಘದ ರೂಪುರೇಷೆ, ಆಡಳಿತ ನಿರ್ವಹಣೆ, ಹಣಕಾಸು ಹೂಡಿಕೆ ಮುಂತಾದ ವಿಷಯಗಳ ಬಗ್ಗೆ ವ್ಯಾಪಕ ಚರ್ಚೆಗಳು. ಒಂದು ಕೋಟಿ ರೂ. ಪಾಲು ಬಂಡವಾಳ ಹೂಡಿಕೆಯ ನಿರ್ಧಾರ. ಅದರಲ್ಲಿ ಮುಕ್ಕಾಲು ಪಾಲನ್ನು ಎರಡೂ ರಾಜ್ಯಗಳ ಸರಕಾರಗಳಲ್ಲಿ ಕೊಡಲು ಒಪ್ಪಿಗೆ.

೧೯೭೩ರ ಜುಲೈನಲ್ಲಿ ಕೇಂದ್ರ ಅಡಿಕೆ ಮಾರಾಟ ಮತ್ತು ಸಂಸ್ಕರಣ (CAMCO) ರಿಜಿಸ್ಟರ್ [illegible] ಅಕ್ಟೋಬರಿನಲ್ಲಿ ಮೊದಲು ಮುಂದಿನ [illegible] ಈ ಸ್ವಲ್ಪವಾದರೂ ಪ್ರಮಾಣದ [illegible] ಕಾರ್ಯ ಹಾಗೆ ಪ್ರಾರಂಭಿಸಿ ಕೇವಲ [illegible] ಭಾಗ ಕೆಲಸ ಒಂದಕ್ಕೆ [illegible] ಹೊಸ ಸಂಸ್ಥೆ ಯುವತಿಗೆ ಬೆಲೆ ಹಿಂದೆ ಹೋಗಿಲ್ಲ.

(ಇನ್ನೂ ಇದೆ)

ಏ. ೨೮ ರಿಂದ ಜಿಲ್ಲೆಯಲ್ಲಿ

ರೈತ ಚಳುವಳಿಗೆ ಅಂಕುರಾರ್ಪಣ?

ಕೊಪ್ಪ: ನೆರೆಯ ಶಿವಮೊಗ್ಗ ಜಿಲ್ಲೆಯಲ್ಲಿ ರೈತರ ಬೇಡಿಕೆಗಳಿಗಾಗಿ ವ್ಯಾಪಕವಾದ ಚಳುವಳಿ ನಡೆಯುತ್ತಿದೆ. ಚಿಕ್ಕಮಗಳೂರು ಜಿಲ್ಲೆಗೆ ಈ ಬಿಸಿಯನ್ನು ದಾಟಿಸುವ ಕೊಂಡಿ ಕೊಪ್ಪ ತಾಲೂಕು ಆಗುವ ಸೂಚನೆ ಕಾಣುತ್ತಿದೆ.

ಏ. ೨೮ರಂದು ಇಲ್ಲಿನ ಪುರಭವನದಲ್ಲಿ ಹೆಚ್. ಜಿ. ಗೋವಿಂದೇಗೌಡರ ಅಧ್ಯಕ್ಷತೆಯಲ್ಲಿ ನಡೆದ ತಾ|| ರೈತ ಸಮಿತಿಯ ಸಭೆ ಏ. ೨೯ರ ಬುಧವಾರದಿಂದ ತಾ|| ಕಚೇರಿಯ ಪಿಕೆಟಿಂಗ್ ನಡೆಸಲು ಒಮ್ಮತದ ತೀರ್ಮಾನ ತೆಗೆದುಕೊಂಡಿದೆ.

ಈ ಸಂಬಂಧ ತಾ| ಹೋರಾಟ ಸಮಿತಿ ರಚಿಸಲಾಗಿದೆ. ಹೋಬಳಿಗೊಬ್ಬ ಸಂಚಾಲಕರನ್ನು ನೇಮಿಸಲಾಗಿದ್ದು, ಅವರಿಗೆ ಪ್ರತಿ ಹೋಬಳಿಯಿಂದ ಇಪ್ಪತ್ತು ಜನರನ್ನು ಹೋರಾಟ ಸಮಿತಿಗೆ ನೇಮಿಸುವ ಅಧಿಕಾರ ಕೊಡಲಾಗಿದೆ. ಸಂಚಾಲಕರು: ಕಸಬಾ ಹೋಬಳಿ-ಸತೀಶ್; ಮೇಗುಂದಾ-ಬಿ. ಎಂ. ಶ್ರೀನಿವಾಸ ನಾಯ್ಕ; ಹರಿಹರಪುರ-ಬಿ. ಜಿ. ಚಂದ್ರಶೇಖರ್.

ತಾಲೂಕಿನಿಂದ ೧೦ ಜನ ಯುವಕಸೈತರು ಶಿವಮೊಗ್ಗದಲ್ಲಿ ತರಬೇತಿ ಪಡೆದು ಬಂದಿದ್ದಾರೆ. ಅವರು ಅಂದಿನ ಸಭೆಯಲ್ಲಿ ಚಳುವಳಿಯ ಬಗ್ಗೆ ಮಾಹಿತಿ ನೀಡಿದರು.

ಏ. ೨೮ರಿಂದ ಪ್ರತಿದಿನ ಅನುಕ್ರಮವಾಗಿ ಕೊಪ್ಪ, ನರಸೀಪುರ, ಹಿರೇಕೊಡಿಗೆ, ಕೆಸವೆ ಗ್ರಾಮಪಂಚಾಯ್ತಿಗಳ ೧೦ ಜನ ಸದಸ್ಯರು ಪಿಕೆಟಿಂಗ್ ನಡೆಸುತ್ತಾರೆ. ಅನಂತರ ರೈತರ ಅಭಿಪ್ರಾಯಗಳನ್ನು ಸಂಗ್ರಹಿಸಿ ಚಳುವಳಿಯ ಮುಂದಿನ ಹಂತವನ್ನು ನಿರ್ಣಯಿಸಲು ಸಭೆಯಲ್ಲಿ ನಿರ್ಧರಿಸಲಾಗಿದೆ.

ಹೋರಾಟ ನಿಧಿಗಾಗಿ ರೈತರಿಂದ ಹಣ ಸಂಗ್ರಹ ನಡೆದಿದೆ.

ಕಿಡಿ ಹಾರುವುದನ್ನು ಕಾದು ... ...

ಶೃಂಗೇರಿ ತಾ|| ರೈತ ಸಂಘ ವಿವಿಧ ಬೇಡಿಕೆಗಳಿಗಾಗಿ ಈಗಾಗಲೇ ಚಳುವಳಿಯ ತೀರ್ಮಾನ ಪಡೆದುಕೊಂಡಿದ್ದು, ಸಿದ್ಧವಾಗಿದೆ. ಮೂಡಿಗೆರೆ, ತರೀಕೆರೆ ಮುಂತಾದೆಡೆಗಳಲ್ಲೂ ರೈತರಲ್ಲಿ ಅಸಮಾಧಾನ, ಅತೃಪ್ತಿ ಹೊಗೆಯಾಡುತ್ತಿದ್ದು, ಜಿಲ್ಲೆ ಚಳುವಳಿಗೆ ಸಿದ್ಧವಾಗಿರುವಂತೆ ಕಾಣುತ್ತಿದೆ. ಕಿಡಿ ಹಾರುವವರ ಯಾರು-ಕಾದು ನೋಡಬೇಕು.

ವಾರ್ಷಿಕೋತ್ಸವ

ಸೋಮಲಾಪುರ: ಇಲ್ಲಿನ ಸರ್ಕಾರಿ ಕಿ. ಪ್ರಾ. ಶಾಲೆಯ ವಾರ್ಷಿಕೋತ್ಸವ ಈಚೆಗೆ ನಡೆಯಿತು. ಸ. ವಿದ್ಯಾಧಿಕಾರಿ ಎಂ. ಚಂದ್ರಶೇಖರಯ್ಯ ಅಧ್ಯಕ್ಷತೆ ವಹಿಸಿದ್ದರು. ಶಾಲಾ ತನಿಖಾಧಿಕಾರಿಗಳಾದ ಎಸ್. ಆರ್. ಶ್ರೀನಿವಾಸ್, ಎ. ವಿ. ಲಕ್ಷ್ಮೀನಾರಾಯಣ ಮುಖ್ಯ ಅತಿಥಿಗಳಾಗಿದ್ದರು. ನಾರ್ವೆ ಶಾಲಾ ಉಪಾಧ್ಯಾಯ ಜಿ. ಕೆ. ಹಿರಿಯಣ್ಣನವರಿಗೆ ಕೃಷಿ ಡಿಪಾಜಿಟ್ ಬಾಂಡ್ ನೀಡಿ ಸನ್ಮಾನಿಸಲಾಯಿತು.

ಸಿಂಡಿಕೇಟ್ ಬ್ಯಾಂಕಿನಿಂದ
ಎಮ್ಮೆ ವಿತರಣೆ

ಜಯಪುರ: ಸಿಂಡಿಕೇಟ್ ಬ್ಯಾಂಕಿನ ಬಸರಿಕಟ್ಟೆ ಶಾಖೆಯ ವತಿಯಿಂದ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯಡಿ ಎಮ್ಮೆಗಳ ವಿತರಣೆ ಇಲ್ಲಿ ಏ. ೨೦ ರಂದು ನಡೆಯಿತು. ಹೇರೂರು, ಅಗಳಗಂಡಿ ಮತ್ತು ಜಯಪುರ ಗ್ರಾಮ ಪಂಚಾಯ್ತಿಗಳ ೩೬ ಜನ ಸಣ್ಣ, ಅತಿಸಣ್ಣ ರೈತರು, ೩ ಜನ ಗಿರಿಜನರು ಪ್ರಯೋಜನ ಪಡೆದವರಾಗಿದ್ದಾರೆ.

ಈ ಸಂದರ್ಭದಲ್ಲಿ ಬ್ಯಾಂಕಿನ ಮ್ಯಾನೇಜರ್ ಪಿ. ಎನ್. ಹೆಗ್ಡೆ, ಜಯಪುರ ಪಶುವೈದ್ಯಾಧಿಕಾರಿ, ಕ್ಷೇತ್ರಾಭಿವೃದ್ಧಿ ಅಧಿಕಾರಿ ಕೆ. ಬಾಲಣ್ಣಗೌಡ, ತಾ|| ಪಶುಸಂಗೋಪನ ವಿಸ್ತರಣಾಧಿಕಾರಿ ಎಲ್. ಶ್ರೀನಿವಾಸ್, ತಾ. ಅ. ಮಂ ಸದಸ್ಯ ಕೆ. ಟಿ. ಸುಬ್ಬಣ್ಣ, ಹಾಗೂ ಎಲ್ಲ ಗ್ರಾಮ ಪಂಚಾಯ್ತಿ ಅಧ್ಯಕ್ಷರುಗಳು ಹಾಜರಿದ್ದರು.

ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಎಸ್. ರಾಂಭಟ್ಟ ಸ್ವಾಗತಿಸಿದರು. ಶಾಲಾ ವರದಿ ಓದಿದ ಉಪಾಧ್ಯಾಯ ವೈ. ಎಸ್. ಸುಬ್ರಾವ್ ವಂದನಾರ್ಪಣೆ ಮಾಡಿದರು.

(ವರದಿ: ಎಸ್. ರಾಂಭಟ್ಟ)

ಕ್ಯಾಮ್ಕೋ: ಬೆಳೆಗಾರರ ಹಿತರಕ್ಷಣೆಯೇ ಗುರಿ

(೩ನೇ ಪುಟದಿಂದ)

ಅಲ್ಲಿಂದ ಖರೀದಿ ಸ್ವಲ್ಪ ಸ್ವಲ್ಪ ಜಾಸ್ತಿ ಮಾಡುತ್ತಾ ೧೯೮೧ರಲ್ಲಿ ಒಟ್ಟು ಬೆಳೆಯ ಶೇ. ೧೨ ರಷ್ಟು ಖರೀದಿಯಾಗಿದೆ. ೮೧-೮೨ಕ್ಕೆ ಶೇ. ೨೦ರಿಂದ ೨೫ರ ಗುರಿ ಹಾಕಿಕೊಳ್ಳಲಾಗಿತ್ತು. ಅಂಕಿ-ಅಂಶ ದೊರೆತಿಲ್ಲ. ಇತ್ತೀಚೆಗೆ ಅಡಿಕೆಯ ಬಳಕೆಯ ಪ್ರದೇಶಗಳಲ್ಲಿ ಮಾರಾಟದ ಡಿಪೋಗಳನ್ನು ತೆರೆಯಲಾಗಿದೆ.

ಸಂಘದ ಅಂತಿಮ ಗುರಿ—ಅಡಿಕೆ ಬೆಳೆಗಾರರ ಹಿತರಕ್ಷಣೆ ಹೊರತು ಬರೀ ಬೆಳೆಯ ಹಿತರಕ್ಷಣೆಯಲ್ಲ. ಆದ್ದರಿಂದ ಧಾರಣೆ ವಿಷಯ ಅಲ್ಲದೆ, ಬೆಳೆಗಾರರಿಗೆ ಬೇಕಾಗುವ ಗೊಬ್ಬರ, ಔಷಧಿಗಳು ಮತ್ತು ಸಲಹೆಗಳನ್ನು ಒದಗಿಸುವುದೂ ಸಂಘದ ಒಂದು ಕೆಲಸ.

ಅಡಿಕೆ, ಕೋಕೋ ಮತ್ತು ಮೆಣಸಿನ ಬೆಳೆಗಳಿಗೆ ಬೇಕಾಗುವ ೧೦: ೪: ೧೪ ಪ್ರಮಾಣದ ಯಾವ ರಸಗೊಬ್ಬರವೂ ಲಭ್ಯವಿಲ್ಲದ್ದರಿಂದ ಕ್ಯಾಮ್ಕೋ ಸಂಸ್ಥೆಯೇ ಅಂಥ ಬಗೆಯೊಂದನ್ನು ಮುಂಬೈಯಲ್ಲಿ ತಯಾರಿಸುತ್ತಿದೆ. ಮುಂದಿನ ವರ್ಷದಿಂದ ಮೈಲುತುತ್ತ ತಯಾರಿಸುವ ಯೋಜನೆ ಇದೆ.

ಉಪಬೆಳೆ ಅನಿವಾರ್ಯ

ಯಾವುದೇ ಒಂದು ಬೆಳೆಯನ್ನು ಇಷ್ಟೊಂದು ಜನ ನೆಚ್ಚಿಕೊಂಡಿರುವುದು ಯಾವತ್ತಿದ್ದರೂ ಅಪಾಯಕರ. ಕೆಲವೆಡೆ ಕಾಫಿ ಬೆಳೆಯುತ್ತಾರೆ. ಬಾಳೆಗೆ ಎಲ್ಲ ಕಡೆ ಕಟ್ಟೆರೋಗ ಬಂದು ನಾಶವಾಗುತ್ತಿದೆ. ಈ ದೃಷ್ಟಿಯಿಂದ, ಅಡಿಕೆಯ ಜೊತೆ ಉತ್ತಮವಾಗಿ ಬೆಳೆಯುವ ಕೋಕೋ ಬೆಳೆಯುವಂತೆ ಕ್ಯಾಮ್ಕೊ ಬೆಳೆಗಾರರಿಗೆ ಸೂಚಿಸಿತ್ತು. ಸರ್ಕಾರ ಕೂಡ ಪ್ರೋತ್ಸಾಹ ಘೋಷಿಸಿತ್ತು. ಹಲವು ರೈತರು ಬೆಳೆದರು ಕೂಡ. ಆದರೆ ೧೯೮೦ ರ ಮೇ ೧೮ ರಿಂದ ಕ್ಯಾಡ್‌ಬರೀಸ್ ಕಂಪೆನಿ ಕೋಕೋ ಖರೀದಿಯನ್ನು ನಿಲ್ಲಿಸಿತು. ಇನ್ನಿತರ ಖರೀದಿದಾರ ಸಂಸ್ಥೆಗಳೂ ನಿಲ್ಲಿಸಿದವು. ಆಗ ಕ್ಯಾಮ್ಕೊ ಆ ಎಲ್ಲ ಸರಕನ್ನೂ ಖರೀದಿಸಿತು.

ಹೀಗೆ ಅಡಿಕೆ ಬೆಳೆಗಾರರಿಗೆ ಅತ್ಯಂತ ಉಪಯುಕ್ತವಾಗಬಲ್ಲ ಕೋಕೋಗೆ ಸರಿಯಾದ ಮಾರುಕಟ್ಟೆ ಒದಗಿಸುವ ದೃಷ್ಟಿಯಿಂದ ಕ್ಯಾಮ್ಕೊ ಚಾಕಲೇಟ್ ಕಾರ್ಖಾನೆಯೊಂದನ್ನು ಸ್ಥಾಪಿಸಲು ನಿರ್ಧರಿಸಿದೆ. ೧೯೮೩ ರ ವೇಳೆಗೆ ಅದು ಕಾರ್ಯಾರಂಭ ಮಾಡಬಹುದು.

ಕೊಪ್ಪದ ಸುತ್ತಮುತ್ತಲ ಊರುಗಳಲ್ಲಿ ಸಾಕಷ್ಟು ಬೆಳೆಗಾರರು ಕೋಕೋ ಬೆಳೆಯಲು ಮುಂದೆ ಬಂದಲ್ಲಿ ಕೊಪ್ಪದಲ್ಲಿ ಒಂದೂ ಮುಕ್ಕಾಲು ಲಕ್ಷ ರೂ. ವೆಚ್ಚದಲ್ಲಿ ಸಂಸ್ಕರಣ ಘಟಕ ತೆರೆಯಲು ಸಂಸ್ಥೆ ಸಿದ್ಧವಿದೆ.

ಈ ಎಲ್ಲ ವಿವರ ನೀಡಿದವರು ಕ್ಯಾಮ್ಕೊದ ಅಧ್ಯಕ್ಷ ವಾರಣಾಸಿ ಸುಬ್ರಾಯಭಟ್ಟರು. ಅವರು ಏ ೧೮ ರಂದು ಕೊಪ್ಪದ ಅಡಿಕೆ ಬೆಳೆಗಾರರ ಸಂಘಕ್ಕೆ ಭೇಟಿಕೊಟ್ಟು, ಸದಸ್ಯರನ್ನು ಉದ್ದೇಶಿಸಿ ಮಾತನಾಡಿದರು.

ಸಮಸ್ಯೆಗಳು-ಸಂಘಟನೆ

ಅಡಿಕೆ ಬೆಳೆಗಾರರ ಎದುರಿರುವ ಸಮಸ್ಯೆಗಳನ್ನೂ ತಮ್ಮ ಸಂಸ್ಥೆಯ ಧ್ಯೇಯ, ಯೋಜನೆಗಳನ್ನೂ ಮೇಲ್ಕಂಡಂತೆ ವಿವರಿಸಿದ ಅವರು ಬೆಳೆಗಾರರು ಸಂಘಟಿತರಾಗಿ ಕೆಲಸ ಮಾಡುವ ಅಗತ್ಯವನ್ನು ಒತ್ತಿ ಹೇಳಿದರು. ಕಳೆದ ವರ್ಷ ಅಡಿಕೆ ವ್ಯಾಪಾರಿಗಳ ಒಕ್ಕೂಟವು ೩ ತಿಂಗಳ ಕಾಲ ಕೃತಕ ಕುಸಿತ ಸೃಷ್ಟಿಸಿ, ಕ್ಯಾಮ್ಕೊದ ಆರ್ಥಿಕ ಸ್ಥಿತಿಯನ್ನು ಮುರಿಯಲು ಪ್ರಯತ್ನಿಸಿದ್ದನ್ನು ಉದಾಹರಿಸಿದ ಅವರು, "ಈ ಕುತಂತ್ರದ ಅರ್ಥ ವಿವರಿಸಿ ಧಾರಣೆ ಕುಸಿಯುವ ಮುನ್ಸೂಚನೆಯನ್ನು ನಾವು ಕೊಟ್ಟಿದ್ದೆವು. ಬೆಲೆ ಕುಸಿತ ಏಕ್‌ದಂ ಆಗದೆ ಹಂತ ಹಂತವಾಗಿ ಆಗುವಂತೆ ಪ್ರಯತ್ನಿಸಿದೆವು. ಆದರೆ, ಬಡ್ಡಿದರ ಶೇ. ೧೩ ರಿಂದ ಶೇ ೧೭.೫ಕ್ಕೆ ಏರಿಕೆ ಹಾಗೂ ಸಾಲ ನೀಡಿಕೆಗೆ ರಿಸರ್ವ್ ಬ್ಯಾಂಕಿನ ನಿರ್ಬಂಧಗಳಿಂದಾಗಿ ಅದು ಸಾಧ್ಯವಾಗಲಿಲ್ಲ. ಆದರೆ ಈಗ ಸಂಸ್ಥೆಗೆ ೧೫ ಕೋಟಿ ರೂ. ಸಾಲ ಎತ್ತಲು ರಿಸರ್ವ್ ಬ್ಯಾಂಕಿನ ಅನುಮತಿ ಸಿಕ್ಕಿದ್ದು, ಅಡಿಕೆ ಧಾರಣೆ **ಇನ್ನೂ ಕುಸಿಯುವುದಿಲ್ಲ** ಎಂಬ ಭರವಸೆ ಕೊಡಲು ನಾವೀಗ ಸಮರ್ಥರು." ಎಂದರು.

ಕೃಷಿ ಆದಾಯ ತೆರಿಗೆಯನ್ನು ಹೇರಲು ಸರ್ಕಾರ ತೀರ್ಮಾನಿಸಿದ್ದು ಆ ಬಗೆಗಿನ ಈವರೆಗಿನ ಬೆಳವಣಿಗೆಗಳನ್ನು ಅವರು ವಿವರಿಸಿದರು. ಸಂಸ್ಥೆ ಮತ್ತು ಬೆಳೆಗಾರರ ಪ್ರತಿನಿಧಿಗಳ ಸಲಹೆಗಳನ್ನು ಒಪ್ಪಿರುವುದಾಗಿ ನೀಡಿದ್ದ ಭರವಸೆಗಳಿಗೆ ವ್ಯತಿರಿಕ್ತವಾಗಿ ಪರಿಶೀಲನಾ ಸಮಿತಿ ಮಾಡಿರುವ ಅಂತಿಮ ಶಿಫಾರಸುಗಳಿಂದಾಗಿ ಎರಡೂವರೆ ಎಕ್ರೆಗಿಂತ ಹೆಚ್ಚಿನ ಜಮೀನುಳ್ಳವರಿಗೆ ದೊಡ್ಡ ಹೊರೆ ಬೀಳುವುದನ್ನು ಅವರು ಪ್ರಸ್ತಾಪಿಸಿದರು. ಈ ಬಗ್ಗೆ ಮಂತ್ರಿಗಳು ಬಂದಾಗ ಅವರನ್ನು ಎಲ್ಲ ಒಟ್ಟಾಗಿ ಕೇಳಿ ಎಂದ ಅವರು, ಒತ್ತಡ, ಹೋರಾಟ ಬೇಕಾಗಬಹುದು ಎಂದು ಸೂಚಿಸಿದರು. ಹೆಚ್ಚು ಜನ ಬೆಳೆಗಾರರು ಸಂಘದ ಸದಸ್ಯರಾಗಲು ಅವರು ವಿನಂತಿಸಿದರು.

ಅಡಿಕೆ ಬೆಳೆಯ ರೋಗಗಳ ಬಗ್ಗೆ ಕೇರಳ, ಬೆಂಗಳೂರು ವಿ. ವಿ. ನಿಲಯಗಳು ಹಾಗೂ ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಗಳು ಜಂಟಿಯಾಗಿ ಯೋಜನೆ ಹಾಕಿದ್ದು, ತೆಂಗು, ಅಡಿಕೆ ಮುಂತಾದ ಸಮಾನ ರೀತಿಯ ಸಸ್ಯಗಳಿಗೆ ಬರುವ ವಿಸ್ತವ್ಯಾಪಿ ರೋಗ ಇದಾಗಿರಬಹುದು; ಆ ಬಗ್ಗೆ ಸಂಶೋಧನೆ ಮುಂದುವರಿದಿದೆ ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರಿಸುತ್ತ ತಿಳಿಸಿದರು.

ಬೆಳೆಗಾರರ ಸಂಘದ ಕಾರ್ಯದರ್ಶಿ ಜಿ. ಎಸ್. ಶ್ರೀಕಂಠ ಸ್ವಾಗತಿಸಿದರು. ಪಿ. ಜಿ. ಗುರ್ಜಾರ್ ಅತಿಥಿಗಳ ಪರಿಚಯ ಮಾಡಿದರು. ತಾಲೂಕಿನ ಬೆಳೆಗಾರರ ಹಾಗೂ ತಾ. ಅ. ಮಂಡಳಿಯ ಪರವಾಗಿ ಅಧ್ಯಕ್ಷ ಬಿ. ಜಿ. ಚಿದಂಬರ್ ಅತಿಥಿಗಳಿಗೆ ಮಾಲಾರ್ಪಣೆ ಮಾಡಿದರು. ಎನ್. ಎಸ್. ನಾಗೇಂದ್ರಭಟ್ ವಂದಿಸಿದರು.

ಕ್ಯಾಮ್ಕೊಸಂಸ್ಥೆಗೆ ಕೊಪ್ಪ ತಾಲೂಕಿನಲ್ಲಿ ಕೇವಲ ೩೬ ಜನ ಮಾತ್ರ ಸದಸ್ಯರಾಗಿದ್ದಾರೆ. ಶೃಂಗೇರಿ, ನ. ರಾ. ಪುರ ತಾಲೂಕುಗಳಲ್ಲಿ ಈ ಸಂಖ್ಯೆ ಇನ್ನೂ ಕಡಿಮೆಯಿರಬಹುದು.

ಸಂಪಾದಕ, ಪ್ರಕಾಶಕ ಮತ್ತು ಮುದ್ರಕ:
ಶಿರಿಮನೆ ನಾಗರಾಜ್.
ಅಚ್ಚು: ನೇಸರ ಮುದ್ರಣ, ಕೊಪ್ಪ.